|| ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ||

|| ಶ್ರೀಸತ್ಯಧರ್ಮತೀರ್ಥಗುರ್ವಂತರ್ಗತ ಶ್ರೀವಾದಿರಾಜಗುರುಭ್ಯೋ ನಮಃ ||




ಶ್ರೀಸತ್ಯಧರ್ಮತೀರ್ಥರು

(ಕ್ರಿ.ಶ. 1797 - 1830)

ಶ್ರೀಸತ್ಯವರವಾರಾಶಿ (ದುಗ್ಧಾಬ್ಧೇರುತ್ಥಿತಾ) ಸಂಜಾತಾ ಜಗತೀತಲೇ ।
ಸುಧಾ ಶ್ರೀಸತ್ಯಧರ್ಮಾಖ್ಯಾ - ಪಾವಯೇತ್ಸರತಃಸತಃ ||

ಚರಮ ಶ್ಲೋಕ (ಶ್ರೀಸತ್ಯಸಂಕಲ್ಪತೀರ್ಥರು)

**ಪೀಠಿಕೆ :**

ಶ್ರೀಮದಾಚಾರ್ಯರ ನಂತರ , ಶ್ರೀಮದುತ್ತರಾದಿಮಠದ ಸರ್ವಜ್ಞಪೀಠವನ್ನಲಂಕರಿಸಿದ ಯತಿಗಳಲ್ಲಿ ಶ್ರೀಸತ್ಯಧರ್ಮತೀರ್ಥರು ಇಪ್ಪತ್ತೇಳನೆಯವರು. ಇವರು ಶ್ರೀಸತ್ಯವರತೀರ್ಥರಾದ ನಂತರ, ಶ್ರೀಸತ್ಯಸಂಕಲ್ಪತೀರ್ಥರ ಮುನ್ನ ಅಂದರೆ ಕ್ರಿ.ಶ. 1797-1830ರವರೆಗೆ (ಶಾಲಿವಾಹನ ಶಕೆ 1719 ರ ಪಿಂಗಳ ಸಂವತ್ಸರದ ಶ್ರಾವಣ ಶುದ್ಧ ಸಪ್ತಮೀ ದಿನದಿಂದ ಶಾಲಿವಾಹನ ಶಕೆ 1752ರ ವಿಕೃತಿ ಸಂವತ್ಸರದ ಶ್ರಾವಣ ಬಹುಳ ತ್ರಯೋದಶಿಯವರಿಗೆ), ಸುಮಾರು ಮೂವತ್ತುಮೂರು ವರ್ಷಗಳ ಕಾಲ, ಪೀಠಾಧಿ

ಪತಿಗಳಾಗಿದ್ದರು. ಈ ಅವಧಿಯಲ್ಲಿ ಶ್ರೀಮದುತ್ತರಾದಿಮಠವು ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದೊಡನೆ ಹಾಗೂ ನೆರೆಹೊರೆಯ ಪೇಶ್ವೆಯವರು. ಹೈದರಾಬಾದಿನ ನಿಜಾಮರು. ಇತರ ರಾಜಮಹಾರಾಜರು, ಜಹಗೀರುದಾರರು. ಹಾಗೂ ಜಮೀನ್ದಾರರು ಇವರುಗಳೊಡನೆ ಉತ್ತಮ ಸಂಪರ್ಕ ಹೊಂದಿ. ಅವರೆಲ್ಲರಿಂದಲೂ ಗೌರವಿಸಲ್ಪಟ್ಟಿತ್ತು. ಇದರಿಂದಾಗಿ ತನ್ನ ಯಶಸ್ಸನ್ನು ಕೀರ್ತಿಯನ್ನು ಹೆಚ್ಚಿಸಿಕೊಂಡುದಲ್ಲದೆ. ಈ ರಾಜಮನೆತನಗಳ ಉದಾರ ಕೊಡುಗೆಯಿಂದ ತನ್ನ ಆರ್ಥಿಕ ಸಂಪನ್ನತೆಯನ್ನೂ ಆ ರಾಜಮನೆತನಗಳು ಪ್ರಭುತ್ವ ನಡೆಸುತ್ತಿದ್ದ ಪ್ರದೇಶಗಳಲ್ಲಿ ತನ್ನ ಶಿಷ್ಯಸಂಪತ್ತನ್ನೂ ಬೆಳೆಯಿಸಿಕೊಂಡಿತು.

ಶ್ರೀಸತ್ಯಧರ್ಮತೀರ್ಥರು ಶಾಸ್ತ್ರ ಹಾಗೂ ಸಾಹಿತ್ಯ ಕ್ಷೇತ್ರಗಳೆರಡರಲ್ಲಿಯೂ ಉದ್ದಾಮ ಪಂಡಿತರಾಗಿ, ಭಾವೀಸಮೀರ ಶ್ರೀವಾದಿರಾಜರಂತೆ ದ್ವೈತವೇಂದಾತವನ್ನು ತಮ್ಮ ಟೀಕೆ ಟಿಪ್ಪಣಿಗಳಿಂದ ಶ್ರೀಮಂತಗೊಳಿಸಿದರು. ತಮ್ಮ ಅಸಾಧಾರಣ ಪ್ರತಿಭೆಯಿಂದ, ಕಲ್ಪನಾಶಕ್ತಿಯಿಂದ , ಸಂಸ್ಕೃತ ಭಾಷೆಯ ಮೇಲಣ ಪ್ರಭುತ್ವದಿಂದ. ಕಾವ್ಯಕರ್ತೃಗಳಾಗಿ, ಸಮರ್ಥ ಟಿಪ್ಪಣೀಕಾರರಾಗಿ ಹೆಸರ್ಗೊಂಡರು. ಶ್ರೀಮದಾಚಾರ್ಯರ ನಂತರ ಶಾಸ್ತ್ರ ಸಾಹಿತ್ಯ ಹಾಗೂ ಪುರಾಣಗಳನ್ನು ಕುರಿತು ವ್ಯಾಖ್ಯೆಯನ್ನು ಬರೆದರು. ತರ್ಕ, ವ್ಯಾಕರಣ ಹಾಗೂ ಮೀಮಾಂಸ ಶಾಸ್ತ್ರಗಳಲ್ಲಿ ಮೇಲ್ಮೆಯನ್ನು ಸಾಧಿಸಿದರು.

ಈ ಚಿಕ್ಕ ಹೊತ್ತಿಗೆಯಲ್ಲಿ ಎರಡು ಭಾಗಗಳಿದ್ದು ಮೊದಲನೆಯದರಲ್ಲಿ ಸಂಕ್ಷಿಪ್ತವಾಗಿ ಅವರ ಜೀವನ ಚರಿತ್ರೆಯೂ ಎರಡನೆಯ ಭಾಗದಲ್ಲಿ ಅವರ ಕೃತಿಗಳ ಪರಿಚಯ ಮಾಡಿಕೊಡುವ ಶ್ರದ್ಧಾಪೂರ್ವಕ ಪ್ರಯತ್ನವೂ ನಡೆದಿದೆ.

### ನವರತ್ನದವರು :–

ಶ್ರೀಮದುತ್ತರಾದಿಮಠಾಧೀಶರಾಗಿದ್ದ ಶ್ರೀಸತ್ಯನಿಧಿತೀರ್ಥರು (ಕ್ರಿ.ಶ. 1638-1660) ತಮ್ಮ ಸಂಚಾರಕಾಲದಲ್ಲಿ ಒಮ್ಮೆ ಬಹಮನೀ ರಾಜ್ಯಗಳಲ್ಲಿ ಪ್ರಸಿದ್ಧವಾದ ಬಿಜಾಪುರಕ್ಕೆ ಭೇಟಿಯಿತ್ತಿದ್ದರು. ಆ ಸಮಯದಲ್ಲಿ ಇಮ್ಮಡಿ ಇಬ್ರಾಹಿಂ ಆದಿಲ್ ಷಾ (ಕ್ರಿ.ಶ. 1620-1656) ಅಲ್ಲಿ ರಾಜ್ಯವಾಳುತ್ತಿದ್ದನು. ಆತನ ಆಸ್ಥಾನದಲ್ಲಿ ಮಹೀಪತಿದಾಸರು

ಕೋಶಾಧ್ಯಕ್ಷರಾಗಿದ್ದರು. ದೊರೆಯ ಪರಮತಸಹಿಷ್ಣುವಾಗಿದ್ದುದರ ಕಾರಣವಾಗಿ. ಆ ರಾಜ್ಯದಲ್ಲಿ ಗುರುಮಠಗಳ ಕಾರ್ಯಕಲಾಪಗಳು ಸುಸೂತ್ರವಾಗಿ ಯಾವ ರೀತಿಯ ಆತಂಕಗಳಿಲ್ಲದೆ. ವಿಕಸಿತಗೊಳ್ಳುತ್ತಿದ್ದವು. ಸುಭಿಕ್ಷದಿಂದ ಕೂಡಿದ ಆ ರಾಜ್ಯದಲ್ಲಿ ಅನೇಕ ಲೋಕೋಪಯೋಗಿ ಕಾರ್ಯಗಳು ನಡೆದು. ರಾಜ್ಯವು ಪ್ರಗತಿಪಥದಲ್ಲಿತ್ತು.

ಶ್ರೀಪಾದರು ರಾಜಧಾನಿಗೆ ಭೇಟಿಯಿತ್ತ ಸಮಯದಲ್ಲಿ ರಾಜಾಸ್ಥಾನದಲ್ಲಿ ದ್ವೈತಾದ್ವೈತ ಚರ್ಚೆಯ (ಆಗಿನ ಪದ್ಧತಿಯಂತೆ ) ನಿಯೋಜಿತವಾಯಿತು. ಈ ಅನಿರೀಕ್ಷಿತ ಬೆಳವಣಿಗೆಯು ಶ್ರೀಪಾದರಿಗೆ ಕೊಂಚ ಆತಂಕವನ್ನುಂಟುಮಾಡಿತು. ಶ್ರೀಮಠದ ಘನತೆ ಗೌರವಗಳನ್ನು ಕಾಪಾಡುವ ಮತ್ತು ಅದನ್ನು ಬೆಳೆಸುವ ವಿದ್ವಾಂಸರನ್ನು ತಕ್ಷಣದಲ್ಲಿಯೇ ಸಿದ್ಧಪಡಿಸುವ ಜವಾಬ್ದಾರಿಯು ಶ್ರೀಪಾದರನ್ನು ಕಾಡಿರಬೇಕು. ಈ ಸಂದಿಗ್ಧಸಮಯದಲ್ಲಿ ಪುರುಷೋತ್ತಮಾಚಾರ್ಯರೆಂಬ ಶ್ರೀಮಠದ ಶಿಷ್ಯರು, ತಮ್ಮ ಆರುಮಂದಿ ತಮ್ಮಂದಿರು ಹಾಗೂ ಇಬ್ಬರು ಮೊಮ್ಮಕ್ಕಳನ್ನು ಕೂಡಿ, ಶ್ರೀಪಾದರಲ್ಲಿಗೆ ಬಂದು, ಆ ಜವಾಬ್ದಾರಿಯನ್ನು ಹೊರಲು. ಶ್ರೀಪಾದರ ಆಶೀರ್ವಾದ ಬೇಡಿದರು., ಶ್ರೀಪಾದರು ಅವರನ್ನು ಆಶೀರ್ವದಿಸಿ, ವಾಕ್ಯಾರ್ಥಕ್ಕಾಗಿ ರಾಜಸ್ಥಾನಕ್ಕೆ ಕಳುಹಿಸಿದರು. ಶ್ರೀಹರಿವಾಯುಗಳ ಕೃಪೆಯಿಂದ ಹಾಗೂ ಶ್ರೀಪಾದರ ಆಶೀರ್ವಾದ ಫಲವಾಗಿ ಈ ತಂಡವು, ರಾಜಾಸ್ಥಾನದಲ್ಲಿ ನಡೆದ ವಾಕ್ಯಾರ್ಥದಲ್ಲಿ, ಜಯಶೀಲರಾಗಿ ಶ್ರೀಮಠದ ಕೀರ್ತಿಯನ್ನು ಬೆಳಗಿದರು. ಸುಪ್ರೀತರಾದ ಶ್ರೀಪಾದರು ವಾಕ್ಯಾರ್ಥದಲ್ಲಿ ವಿಜೇತರಾಗಿ ಬಂದ ತಮ್ಮ ಶಿಷ್ಯರನ್ನು ಅಭಿನಂದಿಸಿ , ನವರತ್ನಗಳಂತಿರುವ ಅವರೂ, ಅವರ ಮನೆತನದವರೂ. ಇನ್ನು ಮುಂದೆ ''ನವರತ್ನ'' ದವರೆಂದೇ ಕರೆಯಲ್ಪಡಲೆಂದು ಅಪ್ಪಣೆ ಕೊಡಿಸಿದರು. ಇಷ್ಟೇ ಅಲ್ಲದೆ ಐದು ತಲೆಮಾರುಗಳ ನಂತರ ಆ ಮನೆತನದಲ್ಲಿ ಒಬ್ಬ ಮಹನೀಯರು ಜನಿಸಿ, ವಿಖ್ಯಾತನಾಗುವನೆಂದೂ ಭವಿಷ್ಯ ನುಡಿದರು.

ಶ್ರೀಸತ್ಯಧರ್ಮತೀರ್ಥರು ಪೀಠಾಧಿಪತಿಗಳಾಗಿದ್ದಾಗ ಶ್ರೀಮೂಲನೀತಾರಾಮ ದೇವರ ಹಾಗೂ ಇತರ ದೇವತಾಮೂರ್ತಿಗಳ ಪೂಜೆಗಾಗಿ ಸುಂದರವಾದ ನವರತ್ನ ಮಂಟಪವನ್ನು ಪೂಜಾಮೂರ್ತಿಗಳನ್ನು ಇಡಲು ನವರತ್ನಖಚಿತವಾದ ಸಂಪುಟವನ್ನು ಮಾಡಿಸಿದರು, ಅದನ್ನು ಕಂಡು ಹರುಷಗೊಂಡ ಶ್ರೀಮಠದ ಶಿಷ್ಯರು, ಶ್ರೀಪಾದರ

ಪೂರ್ವಾಶ್ರಮದ ಬಂಧುಗಳನ್ನು " ನವರತ್ನ " ದವರೆಂದೇ ಸಂಭೋಧಿಸುವುದು ರೂಢಿಯಲ್ಲಿ ಬಂದಿದೆ.

## ಬಾಲ್ಯ :–

ಪೂರ್ವಾಶ್ರಮದಲ್ಲಿ ಶ್ರೀಪಾದರ ಹೆಸರು ಪುರುಷೋತ್ತಮಾಚಾರ್ಯರೆಂದು. ಇವರು ಸವಣೂರಿನಲ್ಲಿ ಕ್ರಿ.ಶ. 1750 ಶುಕ್ಲ ಸಂವತ್ಸರದ ಪುಷ್ಯ ಬಹುಳ ಷಷ್ಠಿ ಜನಿಸಿದರು. ನವರತ್ನ ಮುದ್ಗಲಾಚಾರ್ಯರ ನಾಲ್ವರು ಗಂಡು ಮಕ್ಕಳಲ್ಲಿ ಇವರೇ ಹಿರಿಯರಾಗಿದ್ದುದರಿಂದ , ಇವರನ್ನು ಅಣ್ಣಯ್ಯಾಚಾರ್ಯರೆಂದು ಕರೆಯುವುದು ರೂಢಿಯಾಗಿ, ಈ ಹೆಸರು ಹೆಚ್ಚು ಬಳಕೆಗೆ ಬಂದಿತು. ಸವಣೂರು ಸಮೀಪದಲ್ಲಿ ವಾಸವಾಗಿದ್ದ ಮುದ್ಗಲಾಚಾರ್ಯರು ಅಷ್ಟೇನೂ ಅನುಕೂಲ ಸ್ಥಿತಿಯಲ್ಲಿದ್ದಿಲ್ಲ. ಬಡತನ ಅವರನ್ನು ಕಾಡುತಿತ್ತು . ಇಂತಹ ಪರಿಸ್ಥಿತಿಯಲ್ಲಿಯೂ ಅಣ್ಣಯ್ಯಾಚಾರ್ಯರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ತೀರ್ಥರೂಪದಲ್ಲಿಯೇ ಮುಗಿಸಿ, ಪ್ರೌಢವ್ಯಾಸಂಗಕ್ಕಾಗಿ ಸವಣೂರಿನಲ್ಲಿ ಆಗ್ಯೆ ನೆಲೆಸಿದ್ದ ಶ್ರೀಸತ್ಯಬೋಧತೀರ್ಥರಲ್ಲಿಗೆ ತೆರಳಿ, ಅವರ ಶಿಷ್ಯತ್ವ ಪಡೆದರು.

## ಶ್ರೀಸತ್ಯಬೋಧರಲ್ಲಿ ಪ್ರೌಢ ವಿದ್ಯಾಭ್ಯಾಸ :–

ಶ್ರೀಸತ್ಯಬೋಧಸ್ವಾಮಿಗಳು (ಕ್ರಿ.ಶ. 1742-1783) ನಲವತ್ತು ವರುಷಗಳಿಗೂ ಮೀರಿ ಶ್ರೀಮದುತ್ತಾರಾದಿಮಠದ ಸರ್ವಜ್ಞಪೀಠವನ್ನಲಂಕರಿಸಿದ್ದ ಮಹಾಮಹಿಮರು; ಆ ಕಾಲದ ವ್ಯಾಸಕೂಟದ ಹಾಗೂ ದಾಸಕೂಟದ ಪ್ರಭೃತಿಗಳೆಲ್ಲರ ಪ್ರೀತಿ ವಿಶ್ವಾಸ ಗಳಿಸಿದ್ದ ಮಹಾನುಭಾವರು. ಮಹಾತಪಸ್ವಿಗಳೆಂದೂ ಜ್ಞಾನಿಗಳೆಂದೂ ಹೆಸರಾಂತವರು. ಶ್ರೀಸತ್ಯಬೋಧಸ್ವಾಮಿಗಳ ನಾಲ್ವರು ಶಿಷ್ಯರು, ಅದರಲ್ಲಿಯೂ ಎರಡು ಮನೆತನಗಳಿಗೆ ಸೇರಿದ ಅಣ್ಣತಮ್ಮಂದಿರು, ಜೊತೆಜೊತೆಯಾಗಿ ಒಂದು ಜೊತೆಯನಂತರ ಇನ್ನೊಂದು ಜೊತೆ, ಗುರುಗಳ ಪೀಠವನ್ನು ಅಲಂಕರಿಸಿದ್ದು ಇತಿಹಾಸದಲ್ಲಿಯೇ ಒಂದು ಅಪರೂಪದ ಘಟನೆ. ಹಾವೇರಿ ಮನೆತನದವರಾದ ಶ್ರೀಸತ್ಯಸಂಧರು(ರಾಮಾಚಾರ್ಯರು) ಕ್ರಿ.ಶ. 1783-1794 ರವರೆಗೂ,

ಶ್ರೀಸತ್ಯವರರು (ಕೃಷ್ಣಾಚಾರ್ಯರು) ಕ್ರಿ.ಶ. 1794 - 1797 ರವರೆಗೂ ಸರ್ವಜ್ಞಪೀಠವನ್ನು ಅಲಂಕರಿಸಿದ್ದರೆ. ಅವರ ನಂತರ ಬಂದ ಶ್ರೀಸತ್ಯಧರ್ಮತೀರ್ಥರು (ನವರತ್ನ ಅಣ್ಣಯ್ಯಾಚಾರ್ಯರು) ಕ್ರಿ.ಶ. 1797 ರಿಂದ 1830 ರವರೆಗೂ ಆಮೇಲೆ ಶ್ರೀಸತ್ಯಸಂಕಲ್ಪರು (ನವರತ್ನ ಶ್ರೀನಿವಾಸಾಚಾರ್ಯರು) ಕ್ರಿ.ಶ. 1830-1840ರವರೆಗೂ ತಮ್ಮ ವಿದ್ಯಾಗುರುಗಳ ಪೀಠವನ್ನು ಅಲಂಕರಿಸಿದ್ದು ಒಂದು ವೈಶಿಷ್ಟ್ಯ.

ನವರತ್ನ ಅಣ್ಣಯ್ಯಾಚಾರ್ಯರು ಶ್ರೀಸತ್ಯಬೋಧಸ್ವಾಮಿಗಳಲ್ಲಿ ತಮ್ಮ ಶಿಷ್ಯ ವೃತ್ತಿಯನ್ನು ಮುಗಿಸುವ ವೇಳೆಗೆ, ದ್ವೈತಶಾಸ್ತ್ರದಲ್ಲಿ ಪರಿಣತಿಯನ್ನು ಪಡೆದಿದ್ದರು, ಅಷ್ಟೇ ಅಲ್ಲದೆ. ಅವರು ಆ ಸಮಯಕ್ಕೆ ತರ್ಕ, ವ್ಯಾಕರಣ ಹಾಗೂ ಮೀಮಾಂಸ ಶಾಸ್ತ್ರಗಳಲ್ಲಿ ಪಾಂಡಿತ್ಯ ಸಂಪಾದಿಸಿದ್ದರು. ಅವರ ಸಂಸ್ಕೃತ ಭಾಷಾಜ್ಞಾನ, ಆ ಭಾಷೆಯ ಮೇಲಣ ಪ್ರಭುತ್ವ ಉನ್ನತ ಮಟ್ಟದ್ದಾಗಿತ್ತು. ನವರತ್ನ ಅಣ್ಣಯ್ಯಾಚಾರ್ಯರು ತಮ್ಮ ವಿದ್ಯಾಗುರುಗಳಾದ ಶ್ರೀಸತ್ಯಬೋಧಸ್ವಾಮಿಗಳ ಹಾಗೂ ತಮ್ಮ ಪರಮ ಗುರುಗಳಾದ ಶ್ರೀಸತ್ಯಸಂಧತೀರ್ಥರ ನಿಕಟ ಸಂಬಂಧ ಹೊಂದಿದ್ದರು. ಆಚಾರ್ಯರು ಪೂರ್ವಾಶ್ರಮದಲ್ಲಿ ಶ್ರೀಸತ್ಯಸಂಧರ ನಂತರ ಸರ್ವಜ್ಞಪೀಠವನೇರಿದ , ಶ್ರೀಸತ್ಯವರತೀರ್ಥರ ಬಳೀ ಆಸ್ಥಾನಪಂಡಿತರಾಗಿದ್ದರು.

### ಆಚಾರ್ಯರ ಮಂತ್ರಾಲಯ ಹಾಗೂ ಸೋದಾ ಯಾತ್ರೆ :–

ಸವಣೂರಿನಲ್ಲಿ ಶ್ರೀಸತ್ಯಬೋಧರಲ್ಲಿ ಶಿಷ್ಯವೃತ್ತಿಯನ್ನು ಮುಗಿಸಿದ ಅನಂತರದಲ್ಲಿ ನವರತ್ನ ಅಣ್ಣಯ್ಯಾಚಾರ್ಯರು ಮಂತ್ರಾಲಯಪ್ರಭುಗಳ ದರ್ಶನಕ್ಕಾಗಿ ಹಾಗೂ ಸೇವೆಗಾಗಿ ಮಂತ್ರಾಲಯಕ್ಕೆ ಬಂದರು. ಶ್ರದ್ಧಾಭಕ್ತಿಗಳಿಂದ ಗುರುರಾಜರ ಸೇವೆ ಮಾಡಿದರು. ಮಂತ್ರಾಲಯಪ್ರಭುಗಳು ಅವರ ಸೇವೆಯನ್ನು ಮೆಚ್ಚಿ ಕನಸಿನಲ್ಲಿ ಅವರಿಗೆ ಕಾಣಿಸಿಕೊಂಡು ಆಚಾರ್ಯರು ಉತ್ತರಾದಿಮಠಕ್ಕೆ ತೆರಳುವುದೆಂದೂ ಕಾಲಾಂತರದಲ್ಲಿ ಅವರು ಆ ಮಠದ ಪೀಠವನ್ನೇರಿ ಕೋಟ್ಯಾಧೀಶರಾಗುವರೆಂದೂ ಶ್ರೀಮದುತ್ತರಾದಿಮಠವು ಅವರ ಕಾಲದಲ್ಲಿ ಬಹು ಮುಂದೆ ಬರುವುದೆಂದೂ ಆಚಾರ್ಯರಿಗೆ ಶ್ರೀಪಾದರು ಸೂಚನೆಯಿತ್ತ ಹಾಗೆ ಭಾಸವಾಯಿತು.

ಮಂತ್ರಾಲಯಪ್ರಭುಗಳ ಸೇವೆ ಮುಗಿಸಿ. ಅವರಿಂದ ಆಶೀರ್ವಾದ ಪಡೆದ ನಂತರ ಆಚಾರ್ಯರು ಸೋದೆಗೆ ತೆರಳಿ ಅಲ್ಲಿ ಶ್ರೀಹಯಗ್ರೀವದೇವರ ಹಾಗೂ ಶ್ರೀವಾದಿರಾಜರ ಸೇವೆಗೆ ಅನುವಾದರು. ಪೂರ್ವಾಶ್ರಮದಲ್ಲಿ ಶ್ರೀಸತ್ಯಧರ್ಮತೀರ್ಥರು ರಚಿಸಿರುವ '' ಶ್ರೀವಾದಿರಾಜಸ್ತೋತ್ರ'' ದಿಂದ ಶ್ರೀಹಯಗ್ರೀವದೇವರು ಹಾಗೂ ಶ್ರೀವಾದಿರಾಜರಲ್ಲಿ ಅವರಿಗಿದ್ದ ಶ್ರದ್ಧಾಭಕ್ತಿವಿಶ್ವಾಸಗಳು ಕಾಣಬರುವುದು. ಆಶ್ರಮಸ್ವೀಕಾರಾನಂತರವೂ, ಶ್ರೀಹಯಗ್ರೀವದೇವರು, ಶ್ರೀಪಾದರ ಮುಖ್ಯ ಉಪಾಸ್ಯಮೂರ್ತಿಗಳಲ್ಲೊಂದಾಗಿ ಪರಿಗಣಿಸಲ್ಪಟ್ಟರು. ಶ್ರೀವಾದಿರಾಜರ ಪ್ರಭಾವವಂತೂ ಶ್ರೀಸತ್ಯಧರ್ಮತೀರ್ಥರ ಕೃತಿಗಳಲ್ಲಿ ಎದ್ದು ಕಾಣುವುದು, ಸೋದಾ ಕ್ಷೇತ್ರದಲ್ಲಿ, ಆ ರುದ್ರರಮಣೀಯ ಕಾನನ ಸಿರಿಯ ಮಧ್ಯೆ ಕಂಗೊಳಿಸುವ ಧವಳಗಂಗಾ ಸರೋವರದ ಪರಿಸರದಲ್ಲಿ , ಶ್ರೀಮದ್ವಾದಿರಾಜರ ಆರಾಧ್ಯದೈವ ಶ್ರೀಹಯಗ್ರೀವದೇವರನ್ನು ಶ್ರೀವಾಗೀಶರವರನ್ನು ಸ್ಮರಿಸುತ್ತಾ, ಉಚ್ಚಕಂಠದಲ್ಲಿ ಅವರುಗಳನ್ನು ಸ್ತೋತ್ರ ಮಾಡುತ್ತಾ, ಕಾಲಮಾನದ ಪರಿವೆಯೇ ಇಲ್ಲದೇ ದಿನಗಳನ್ನು ಕಳೆದಿದ್ದು, ಆಚಾರ್ಯರ ಜೀವನದಲ್ಲಿ ಒಂದು ಅಪೂರ್ವ ಅನುಭವ.

### ಆಸ್ಥಾನಪಂಡಿತರು :

ಶ್ರೀಸತ್ಯಧರ್ಮತೀರ್ಥರು ಆಶ್ರಮ ಸ್ವೀಕಾರ ಮಾಡಿದ ನಂತರ. ಆಚಾರ್ಯರು (ಸಂಸಾರ ಸಮೇತ) ಸವಣೂರು ಬಿಟ್ಟು ಶ್ರೀಸತ್ಯವರರ ಆಸ್ಥಾನಕ್ಕೆ ಬಂದು ಶ್ರೀಪಾದರಿಂದ ಆಸ್ಥಾನ ಪಂಡಿತರಾಗಿ ಪರಿಗಣಿಸಲ್ಪಟ್ಟರು. ಆ ಕಾಲಕ್ಕೇ, ಪ್ರಸಿದ್ಧ ವಾಗ್ಮಿಗಳಾಗಿದ್ದ ಆಚಾರ್ಯರು ಶಾಸ್ತ್ರ ಸಾಹಿತ್ಯ ಕ್ಷೇತ್ರಗಳೆರಡುರಲ್ಲಿಯೂ ಮೇಲ್ಮೆಯನ್ನು ಸಾಧಿಸಿದ್ದರು. ಶ್ರೀಸತ್ಯವರರು ಈ ಸಮಯದಲ್ಲಿಯೇ ಶ್ರೀ ಭಾಗವತಸಾರೋದ್ಧಾರ ಬರೆದ (ಅಡವಿಯಾಚಾರ್ಯರೆಂದು ಹೆಸರುಗಳಿಸಿದ್ದ) ಜಯತೀರ್ಥಾಚಾರ್ಯರಿಗೆ ಆಶ್ರಮದೀಕ್ಷೆ ಕೊಟ್ಟು ಅವರನ್ನು ''ಶ್ರೀವಿಷ್ಣುತೀರ್ಥ '' ರೆಂದು ನಾಮಕರಣ ಮಾಡಿದರು. ಶ್ರೀಸತ್ಯವರರ ಆಸ್ಥಾನದಲ್ಲಿ ಘನ ವಿದ್ವಾಂಸರಾದ ಆದ್ಯ ರಾಮಾಚಾರ್ಯರೂ, ಉಮರ್ಜಿ ಲಕ್ಷ್ಮಣಾಚಾರ್ಯರೂ, ಕರದೀಪ ಆಚಾರ್ಯರೂ

ಇದ್ದು, ಇವರುಗಳು ನವರತ್ನದ ಅಣ್ಣಯ್ಯಾಚಾರ್ಯರ ಮೇಲೆ ತಮ್ಮ ಪ್ರಭಾವವನ್ನು ಬೀರಿರಲು ಸಾಧ್ಯವಿದೆ.

**ಆಶ್ರಮ ಸ್ವೀಕಾರ :**

ದಿವಾನ್ ಪೂರ್ಣಯ್ಯನವರು, ಅಂದಿನ ಸೂಕ್ಷ್ಮ ರಾಜಕೀಯ ಪರಿಸ್ಥಿತಿಯನ್ನು ಗಮನಿಸಿ, ತಮ್ಮ ಗುರುಗಳಾದ ಶ್ರೀಸತ್ಯವರತೀರ್ಥರು ತಮ್ಮ ಉದ್ದೇಶಿತ ಉತ್ತರ ಭಾರತ ಯಾತ್ರೆಯನ್ನು ಸದ್ಯಕ್ಕೆ ಕೈ ಬಿಡುವಂತೆ, ಅವರ ಮನವೊಲಿಸಿದರು. ಪರಿಸ್ಥಿತಿಯು ಸುಧಾರಿಸುವವರೆಗೆ, ಹಿಂದೂಪುರ ತಾಲೂಕಿನ ಸಂತೇಬಿದನೂರಿನಲ್ಲಿ ಉಳಿಯುವಂತೆ ಒತ್ತಾಯಿಸಿ, ಶ್ರೀಪಾದರ ವಾಸ್ತವ್ಯಕ್ಕೆ ಅನುಕೂಲಿಸುವಂತೆ, ಆ ಹಳ್ಳಿಯಲ್ಲಿದ್ದ ತಮ್ಮ ಹಾಗೂ ತಮ್ಮ ಅಣ್ಣನವರ ಮನೆಯಲ್ಲಿ, ಕೆಲವು ಮಾರ್ಪಾಡುಗಳನ್ನು ಮಾಡಿದರು, ದಿವಾನ್‌ರ ಸಲಹೆ ಮೇರೆಗೆ ಸಂಸ್ಥಾನವು ಪೆನಗೊಂಡೆಯಿಂದ ಸಂತೇಬಿದನೂರಿಗೆ ಬರುವ ದಾರಿಯಲ್ಲಿ ಗೋರಿಬಿದನೂರು ತಾಲ್ಲೂಕಿನ ನಾಮಗೊಂಡಲು ಗ್ರಾಮದಲ್ಲಿ ಬೀಡುಬಿಟ್ಟಿತ್ತು.

ಆಸ್ಥಾನದ ಸಂಪತ್ತು ಹಾಗೂ ವೈಭವ ಆ ಪ್ರದೇಶದ ಕಳ್ಳಕಾರರನ್ನು ಆಕರ್ಷಿಸಿತು, ಕ್ರಿ.ಶ. 1797ನೇ ಅಷಾಢ ಶುದ್ಧ ಚತುರ್ದಶೀ ರಾತ್ರಿ ಅಥವಾ ಪೌರ್ಣಿಮೆಯ ಪ್ರಾತಃಸಮಯದಲ್ಲಿ, ಶ್ರೀಪಾದರು ಅಲ್ಪಾಚಮನಕ್ಕೆ ಹೋಗಿದ್ದ ಸಮಯ ನೋಡಿಕೊಂಡು, ಹೊಂಚು ಹಾಕಿದ್ದ ಕಳ್ಳಕಾಕರು ಪೂಜಾ ಮೂರ್ತಿಗಳಿದ್ದ ಶ್ರೀವೇದವ್ಯಾಸಸಂಪುಟವನ್ನು ಅಪಹರಿಸಿ, ಪ್ರತಿಮೆಗಳ ಮೇಲಣ ಆಭರಣಗಳನ್ನು ಅಲ್ಲಿಯೇ ಬಿಸುಟು ಪರಾರಿಯಾದರು. ಬೆಳಗಾದ ಮೇಲೆ ಕಳವು ಪತ್ತೆಯಾಗಿ ಶ್ರೀಪಾದರು ಅನ್ನಪಾನಾದಿಗಳನ್ನು ತೊರೆದರು. ಹಳ್ಳಿಯಲ್ಲಿ ಹಾಹಾಕಾರವುಂಟಾಯಿತು ಶೋಕತಪ್ತರಾದ ಶ್ರೀಪಾದರು ಇಪ್ಪತ್ತು ದಿನಗಳ ಉಗ್ರ ತಪಸ್ಸನ್ನು ಕೈಗೊಂಡರು. ಅದು ಯಾವಾಗ ಕೊನೆಗಾಣುವುದು ಎಂಬ ಸೂಚನೆ ಕಾಣಬರುತ್ತಿದ್ದಿಲ್ಲ, ನಾಮಗೊಂಡಲಿಗೆ ಧಾವಿಸಿ ಬಂದ ದಿವಾನ್ ಪೂರ್ಣಯ್ಯನವರು ಮಹಾರಾಜಾ ಸರ್ಕಾರದ ಪರವಾಗಿ ದಿಟ್ಟ ಕ್ರಮಗಳನ್ನು ಕೈಗೊಂಡರು.

ಆ ಸಮಯದಲ್ಲಿ ಗುತ್ತಿಯಲಿ ಪಾಠಪ್ರವಚನಗಳಲ್ಲಿ ತೊಡಗಿದ್ದ ನವರತ್ನ ಅಣ್ಣಯ್ಯಾಚಾರ್ಯರು ನಾಮಗೊಂಡಲಿಗೆ ಧಾವಿಸಿ ಬಂದರು. ತಮ್ಮ ಸನ್ನಡತೆಯಿಂದ ಹಾಗೂ ಗುರುಹಿರಿಯರಲ್ಲಿ ಭಕ್ತಿ ಗೌರವ ತೋರಿದ್ದಕ್ಕಾಗಿ ಕೇವಲ ಒಂದು ವಾರದ ಹಿಂದೆ ಶ್ರೀಸತ್ಯವರತೀರ್ಥರಿಂದ ಸನ್ಮಾನಿತರಾಗಿದ್ದ ಪಾಮದುರ್ತಿಯ ಗೋವಿಂದರೆಡ್ಡಿಯವರೂ ಕೋದಂಡಪಾಣಿ ರಂಗಾಚಾರ್ಯರೂ ನವರತ್ನ ಅಣ್ಣಯ್ಯಾಚಾರ್ಯರೂ ಪೂಜಾ ಮೂರ್ತಿಗಳ ಅನ್ವೇಷಣೆಯಲ್ಲಿ ಶ್ರದ್ಧಾಭಕ್ತಿಯಿಂದ ತೊಡಗಿದರು. ರೆಡ್ಡಿಯವರ ನಿಷ್ಟುರ ಕ್ರಮಗಳಿಂದಾಗಿ, ಕಳ್ಳರು ಭಾವಿಯೊಂದರಲ್ಲಿ ಸಂಪುಟವನ್ನು ಹುದುಗಿಸಿಟ್ಟಿರುವುದು ಪತ್ತೆಯಾಯಿತು. ಆಚಾರ್ಯರು ಈ ಶುಭ ಸುದ್ದಿಯನ್ನು ಉಗ್ರ ತಪಸ್ಸನ್ನು ಕೈಗೊಂಡಿದ್ದ ಶ್ರೀಪಾದರಿಗೆ ಮುಟ್ಟಿಸಲು ಶ್ರೀಮಠಕ್ಕೆ ಧಾವಿಸಿ ಬಂದರು. ಅಷ್ಟು ಹೊತ್ತಿಗೆ ಪ್ರತಿಮೆಗಳು ಕಳುವಾಗಿ ಇಪ್ಪತ್ತು ದಿನಗಳು ಕಳೆದಿದ್ದವು. ಇಪ್ಪತ್ತೊಂದನೆ ದಿನ ಶ್ರಾವಣ ಶುದ್ಧ ಪಂಚಮೀ ಬೆಳಗ್ಗೆ ಸುದ್ದಿ ತಮಗೆ ಮುಟ್ಟಿದ  ತಕ್ಷಣ ಸಕಲ ವಾದ್ಯ ವೈಭವಗಳೊಡನೆ ಶ್ರೀಮೂಲಸೀತಾರಾಮರ ದರ್ಶನ ಪಡೆಯಲು ಹಾಗೂ ಪ್ರತಿಮೆಗಳನ್ನು ಶ್ರೀಮಠಕ್ಕೆ ಹಿಂದಕ್ಕೆ ಪಡೆಯಲು, ಶ್ರೀಪಾದರು ಭಾವಿಯ ಬಳಿಗೆ ಧಾವಿಸಿ ಬಂದರು. ಶ್ರೀಪಾದರು ಬರುವ ಹೊತ್ತಿಗೆ  ಭಾವಿಯಿಂದ ಸಂಪುಟವನ್ನು ತೆಗೆದು, ಒಂದು ಬಾಳೆಯ ಎಲೆಯ ಮೇಲೆ ದೇವತಾ ಪ್ರತಿಮೆಗಳನ್ನು ಇಡಲಾಗಿತ್ತು, ಶ್ರೀಪಾದರು ಆ ಪ್ರತಿಮೆಗಳನ್ನು ಕಂಡು, ಅವನ್ನು ತಮ್ಮ ಎದೆಗೆ ಅಪ್ಪಿಕೊಂಡು, ತಮ್ಮ ಆನಂದಾಶ್ರುವಿನಿಂದ ಅವುಗಳ ಅಭಿಷೇಕ ಮಾಡಿದರು, ಭಾವೋದ್ರೇಕದಿಂದ ಮೂರ್ಛೆಗೊಂಡರು ಶಿಷ್ಯರು ಶ್ರೀಪಾದರನ್ನು ದೇವತಾ ಪ್ರತಿಮೆಗಳೊಡನೆ , ವಾದ್ಯ ಸಮೇತ ಶ್ರೀಮಠಕ್ಕೆ ಕರೆತಂದರು. ಶ್ರೀಪಾದರನ್ನು ಉಪಚರಿಸಿದರು. ಶ್ರಾವಣಶುದ್ಧ  ಪಂಚಮೀ ದಿನ ಶ್ರೀಮಠದಲ್ಲಿ ಮಹಾಪೂಜೆ , ಸಮಾರಾಧನೆ  ನಡೆಯಿತು, ಅಲ್ಲಿ ಬಹು ಸಂಭ್ರಮದ ವಾತಾವರಣವಿತ್ತು, ಆದರೆ ಶ್ರೀಪಾದರ ಆರೋಗ್ಯ ಬಹು ಸೂಕ್ಷ್ಮ ಸ್ಥಿತಿಯಲ್ಲಿತ್ತು, ಇಪ್ಪತ್ತು ದಿನಗಳ ಉಗ್ರ ತಪಸ್ಸಿನಿಂದ ಅವರು ಬಹಳ ಬಳಲಿದ್ದರು.

ಶ್ರೀಪಾದರ ಸೂಕ್ಷ್ಮ ದೇಹಸ್ಥಿತಿಯನ್ನು ಗಮನಿಸಿದ ದಿವಾನ್ ಪೂರ್ಣಯ್ಯನವರು, ಶ್ರೀಪಾದರು ತಮ್ಮ ಉತ್ತರಾಧಿಕಾರಿಗಳನ್ನು ಆಯುವ ಸಮಯ ಸನ್ನಿಹಿತವಾಗಿದೆ ಎಂಬ ಸೂಚನೆಯನ್ನು ಬಹು ವಿನಯದಿಂದ ಶ್ರೀಪಾದರಿಗೆ ಸೂಚಿಸಲು, ಶ್ರೀಪಾದರು ಈ ದಿಸೆಯಲ್ಲಿ ತಮಗೆ ದೈವೀಸೂಚನೆಯಾಗಿದೆಯೆಂದೂ, ನವರತ್ನ ಅಣ್ಣಯ್ಯಾಚಾರ್ಯರೇ ಶ್ರೀಮೂಲಸೀತಾರಾಮರ ಪೂಜೆ ಮಾಡಲು ಅರ್ಹವ್ಯಕ್ತಿಗಳೆಂದು ನಿರ್ಧರಿಸಲಾಗಿದೆಯೆಂದೂ ತಿಳಿಸಿದರು, ದಿವಾನ್ ಪೂರ್ಣಯ್ಯನವರ ಸಮ್ಮುಖದಲ್ಲಿಯೇ , ಶ್ರೀಪಾದರು ನವರತ್ನ ಅಣ್ಣಯ್ಯಾಚಾರ್ಯರಿಗೆ ಶ್ರಾವಣ ಶುದ್ಧ ಪಂಚಮೀ ದಿನ ಆಶ್ರಮದೀಕ್ಷೆ ಕೊಟ್ಟು ಅವರನ್ನು ''ಶ್ರೀಸತ್ಯಧರ್ಮತೀರ್ಥ'' ರೆಂದು ನಾಮಕರಣ ಮಾಡಿದರು. ನವರತ್ನ ಅಣ್ಣಯ್ಯಾಚಾರ್ಯರಿಗೆ ಆಗ ನಲವತ್ತೇಳು ವಯಸ್ಸು. ಈ ಸಂದರ್ಭದಲ್ಲಿ ಶ್ರೀಸತ್ಯನಿಧಿ ತೀರ್ಥರು ಬಿಜಾಪುರದಲ್ಲಿ ನುಡಿದ ಭವಿಷ್ಯ ನುಡಿಯನ್ನೂ ಮಂತ್ರಾಲಯಪ್ರಭುಗಳು ಆಚಾರ್ಯರ ಕನಸಿನಲ್ಲಿತ್ತ ಸೂಚನೆಯನ್ನೂ ನೆನೆಯಬಹುದು.

ಹಿರಿಯ ಸ್ವಾಮಿಗಳು ಶ್ರಾವಣ ಶುದ್ಧ ಸಪ್ತಮಿಯಂದು ನಾರಾಯಣಧ್ಯಾನ ಪರರಾದರು.

ಶ್ರೀಮೂಲ ಸೀತಾರಾಮರ ಅನ್ವೇಷಣೆಯಲ್ಲಿ ತೊಡಗಿದ್ದ ಮೂವರ ಪೈಕಿ ಶ್ರೀಪಾಮದುರ್ತಿ ಗೋವಿಂದರೆಡ್ಡಿಯವರು ಶ್ರೀಸತ್ಯವರರಿಂದ. ಕೇವಲ ಒಂದು ವಾರದ ಹಿಂದೆ ಪುರಸ್ಕೃತರಾಗಿದ್ದರು. ಶ್ರೀಕೊದಂಡಪಾಣಿ ರಂಗಾಚಾರ್ಯರು ಶ್ರೀಸತ್ಯಧರ್ಮತೀರ್ಥರಿಂದ '' ವ್ಯಾಸಪೂರ್ಣಪ್ರಿಯ '' ಎಂಬ ಬಿರುದನ್ನೂ ತಿರುಮಲಾಪುರ ಎಂಬ ಗ್ರಾಮವನ್ನೂ ಅನ್ವೇಷಣಾ ಕಾರ್ಯದಲ್ಲಿ ಸಹಕರಿಸಿದ್ದಕಾಗಿ ಬಳುವಳಿಯಾಗಿ ಪಡೆದರು.

ಮೋಹನದಾಸರು ತಮ್ಮ ಒಂದು ದೇವರುನಾಮದಲ್ಲಿ ಶ್ರೀಮೂಲಸೀತಾರಾಮರು ಯಾರಿಂದಲೂ ಕಳುವಾಗಿದ್ದಿಲ್ಲವೆಂದೂ. ಆದರೆ ಸೀತಾತಾಯಿಯವರು ತಮ್ಮ ಪತಿಯೊಡನೆ ತಮ್ಮ ತವರಿನಲ್ಲಿ ಭೂದೇವಿಯವರೊಡನೆ ಅಜ್ಞಾತವಾಗಿದ್ದರೆಂದೂ, ಆದರೆ ಶ್ರೀಸತ್ಯವರರ ಉಗ್ರ ತಪಸ್ಸಿನ ಕಾರಣವಾಗ ಸ್ವಸ್ಥಾನಕ್ಕೆ

ತೆರಳಿ, ಶ್ರೀಪಾದರನ್ನು ಅನುಗ್ರಹಿಸಿದರೆಂದೂ, ತಮ್ಮ ಕವಿತಾ ಶೈಲಿಯಲ್ಲಿ ಬಹು ರಮ್ಯವಾಗಿ ವರ್ಣಿಸಿದ್ದಾರೆ.

ಶ್ರೀಸತ್ಯಧರ್ಮತೀರ್ಥರು ತಮ್ಮ ಗುರುಗಳ ವೃಂದಾವನವನ್ನು ಹಿಂದೂಪುರ ತಾಲೂಕಿನ ಉತ್ತರ ಪಿನಾಕಿನೀ ನದೀ ತೀರದಲ್ಲಿರುವ ಸಂತೇಬಿದನೂರಿನಲ್ಲಿ ಶ್ರೀವ್ಯಾಸರಾಯ ಪ್ರತಿಷ್ಠಿತ ಶ್ರೀಹನುಮಂತದೇವರ ಎದುರಿನಲ್ಲಿ ಕಟ್ಟಿಸಿ ಗುರುಗಳ ಆರಾಧನೆಯನ್ನು ಶ್ರದ್ಧಾಭಕ್ತಿಯಿಂದ ವಿಜೃಂಭಣೆಯಿಂದ ನೆರವೇರಿಸಿದರು ಶ್ರೀಪಾದಪುತ್ರರಾದ ಹಾವೇರಿ ಸ್ವಾಮಿರಾಯಾಚಾರ್ಯರಿಗೆ ಈ ಸಂದರ್ಭದಲ್ಲಿ ಕೆಲವು ಗ್ರಾಮಗಳನ್ನು ದಾನವಾಗಿ ಕೊಟ್ಟು ಸಂತೈಸಿದರು.

ದಿವಾನ್ ಪೂರ್ಣಯ್ಯನವರು , ಸಂತೇಬಿದನೂರಿನಲ್ಲಿ ತಮ್ಮ ಹಾಗೂ ತಮ್ಮ ಸೋದರರ ಮನೆಗಳನ್ನು ಶ್ರೀಪಾದರು ವಾಸ್ತವ್ಯಕ್ಕಾಗಿ ಮಾರ್ಪಾಟುಗಳನ್ನು ಮಾಡಿದ್ದರು. ಈ ಸ್ಥಳದಲ್ಲಿಯೇ ಶ್ರೀಸತ್ಯವರರ ವೃಂದಾವನವು ಶಾಸ್ತ್ರರೀತ್ಯಾ ಕಟ್ಟಲ್ಪಟ್ಟಿದೆ. ಈಗ ವೃಂದಾವನವಿರುವ ದೊಡ್ಡಮಠದಲ್ಲಿ ಒಂದು ವಿಸ್ತಾರವಾದ ಅಡಿಗೆಮನೆಯೂ, ಭೋಜನಶಾಲೆಯೂ ಇದೆ. ಶ್ರೀಮಠದ ಎದುರು ಇರುವ ಶ್ರೀಹನುಮ ದೇವಸ್ಥಾನದಲ್ಲಿ, ಒಂದು ಸಿಹಿನೀರು ಭಾವಿಯೂ, ಶ್ರೀಮಠದ ಮುಂದೆ ರಸ್ತೆಯಲ್ಲಿ 'ಬೋರ್‌ವೆಲ್' ಇದೆ. ದಿನನಿತ್ಯ ಶ್ರೀಸತ್ಯವರತೀರ್ಥರಿಗೆ ಪೂಜಾ ಹಾಗೂ ಹಸ್ತೋದಕ ನಡೆಯುತ್ತಿದ್ದು. ಅವರ ಆರಾಧನೆಯು ಮೂರು ದಿನಗಳ ಕಾಲ - ಶ್ರಾವಣ ಶುದ್ಧ ಷಷ್ಠಿಯಿಂದ ಅಷ್ಟಮೀಯವರೆಗೆ ನಿರಾತಂಕವಾಗಿ ನಡೆಯುತ್ತ ಬಂದಿದೆ.

ಶ್ರೀಸತ್ಯವರತೀರ್ಥರಿಗೆ ವೃಂದಾವನದ ಪಕ್ಕದಲ್ಲಿಯೇ ಶ್ರೀಸತ್ಯಪರಾಯಣ ತೀರ್ಥರ ವೃಂದಾವನವು ಕಟ್ಟಲ್ಪಟ್ಟಿದೆ. ಪೂರ್ವಾಶ್ರಮದಲ್ಲಿ ಅವರೂ ಹಾವೇರಿಯವರು. ಚಿಕ್ಕಮಠವೆಂದು ಅವರ ವೃಂದಾವನವು ಪ್ರಸಿದ್ಧಿಯಾಗಿದೆ.

ಶ್ರೀಸತ್ಯಧರ್ಮತೀರ್ಥರು ಸಂತೇಬಿದನೂರಿನಲ್ಲಿ ತಮ್ಮ ಕಾರ್ಯಮುಗಿಸಿ ಕೊಂಡು. ತಮ್ಮ ವಿದ್ಯಾಗುರುಗಳಾದ ಶ್ರೀಸತ್ಯಬೋಧರ ದರ್ಶನಕ್ಕಾಗಿ ಸವಣೂರಿಗೆ ತೆರಳಿದರು. ಸವಣೂರಿನಲ್ಲಿರುವಾಗ ವಿದ್ಯಾಗುರುಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿ. ಅಲ್ಲಿಂದ ಮುಂದೆ ಸಂಸ್ಥಾನ ಸಮೇತ ಹೈದರಾಬಾದ್‌ಕಡೆಗೆ ಪ್ರಯಾಣ ಬೆಳೆಸಿದರು.

ಶ್ರೀಪಾದರು ಆಶ್ರಮ ಸ್ವೀಕಾರ ಮಾಡಿದ ಸಮಯದಲ್ಲಿ (ಕ್ರಿ.ಶ. 1797) ಶ್ರೀರಂಗಪಟ್ಟಣದಲ್ಲಿ ಟೀಪೂಸುಲ್ತಾನನು ರಾಜ್ಯವಾಳುತ್ತಿದ್ದನು. ಆ ಸಮಯದಲ್ಲಿ ಶ್ರೀಪಾದರು ಶ್ರೀರಂಗಪಟ್ಟಣಕ್ಕೆ ಒಂದು ಸಲ ಭೇಟಿಯಿತ್ತಿದ್ದರು.

## ವಿಜಯಯಾತ್ರೆ :-

ಹೈದರಾಬಾದಿನಲ್ಲಿ ಶ್ರೀಪಾದರು ಕಾರ್ಯಕ್ರಮ ಬಹು ಯಶಸ್ಸಿನಿಂದ ಕೂಡಿತ್ತು ಅಲ್ಲಿ ರಾಜಾನಾರಾಯಣರಾಯನೆಂಬ ಪ್ರತಿಷ್ಠಿತರ ಸಹಕಾರದಿಂದ, ನಿಜಾಮರ ಆದರ ಹಾಗೂ ಔದಾರ್ಯಪೂರ್ಣ ಸ್ವಾಗತವು ಶ್ರೀಗಳಿಗೆ ದೊರಕಿತು. ಆ ಭಾಗ್ಯನಗರದ ಉಪನಗರವಾದ ಲಿಂಗಂಪಲ್ಲಿಯಲ್ಲಿ ಶ್ರೀಮಠದ ಶಾಖೆಯೊಂದು ಶ್ರೀಪಾದರಿಂದ ಸ್ಥಾಪಿಸಲ್ಪಟ್ಟಿತು. ಶ್ರೀಪಾದರ ವಿದ್ವತ್ತು, ಪ್ರತಿಭೆಗೆ ಮನಸೋತು, ಹಲವಾರು ಮಂದಿ ಅವರ ಶಿಷ್ಯರಾದರು.

ಶ್ರೀಪಾದರು ಹೈದರಾಬಾದಿನಿಂದ ಗೋದಾವರೀನದೀ ತೀರಕ್ಕೆ ಬಂದರು. ರಾಜಮಹೇಂದ್ರಿಯಲ್ಲಿ ಅವರಿಗೆ ಅಪಾರ ಯಶಸ್ಸು ಗೌರವ ದೊರಕಿ, ಅನೇಕರು ಅವರ ಶಿಷ್ಯರಾದರು. ಆ ಪ್ರಾಂತ್ಯದಲ್ಲಿದ್ದಾಗಲೇ ವಿಜಯನಗರದ ಅರಸರ ಮೇಲೂ ಶ್ರೀಗಳ ವರ್ಚಸ್ಸು, ಪ್ರಭಾವವು ಬಿದ್ದು, ಶ್ರೀಗಳನ್ನು ತಮ್ಮ ಸಂಸ್ಥಾನದಲ್ಲಿ, ಶ್ರೀಗಳು ಒಂದು ತಿಂಗಳು ಬಿಡಾರ ಹೂಡಿ, ಆ ಸಂಸ್ಥಾನದಿಂದ ಶ್ರೀಮಠಕ್ಕೆ ಅಪಾರ ಕೊಡುಗೆಯನ್ನು ದಾನ ರೂಪದಲ್ಲಿ ಪಡೆದರು. ಅವುಗಳಲ್ಲಿ ಮುಖ್ಯವಾದುವು ಮುತ್ತಿನಕಂಠೀ, ನವರತ್ನಖಚಿತ ಪೀಠ ಪ್ರಭಾವಳಿ ಮತ್ತು ಅಸಂಖ್ಯಾತ ಆಭರಣಗಳು. ಆ ಸಂಸ್ಥಾನದಲ್ಲಿಯೂ ಅನೇಕರು ಶ್ರೀಮಠದ ಶಿಷ್ಯರಾದರು.

ವಿಜಯನಗರದಿಂದ ಪ್ರಯಾಣ ಮಾಡಿದ ಶ್ರೀಗಳು ಪಂಡರಾಪುರಕ್ಕೆ ಭೇಟಿ ಇತ್ತು ಅಲ್ಲಿ ಪಾಂಡುರಂಗವಿಠಲನ ದರ್ಶನ ಪಡೆದು, ತಮ್ಮ ಶಿಷ್ಯಸಂಪತ್ತನ್ನು ಹೆಚ್ಚಿಸಿಕೊಂಡರು; ಪೂಣೆಗೆ ತೆರಳಲು ಪೇಶ್ವೆಯವರ ಆಹ್ವಾನವು ಅಲ್ಲಿ ಅವರಿಗೆ ಕಾದಿತ್ತು ಪ್ರತಿಭಾಶಾಲಿಗಳಾದ ಶ್ರೀಗಳಿಗೆ ಅಲ್ಲಿಯೂ ಭವ್ಯ ಸ್ವಾಗತವು ಸಿಕ್ಕಿ ಪೇಶ್ವೆಯವರ ಆಸ್ಥಾನದಲ್ಲಿ ಒಂದು ತಿಂಗಳು ನಿಂತರು. ಶ್ರೀಪಾದರ ವೈಭವಯುತವಾದ ನಿತ್ಯ

ಪೂಜೆಪುನಸ್ಕಾರಗಳನ್ನು ಪಾಠಪ್ರವಚನಗಳನ್ನು ಅಲ್ಲಿನ ಜನತೆಯೂ ಪೇಶ್ವೆಯವರೂ ಮೆಚ್ಚಿದರು. ಶ್ರೀಮಠದ ಧವಳಕೀರ್ತಿಯು, ಘನತೆಯು ಶಾಶ್ವತವಾಗಿ ನಿಲ್ಲಲೆಂದು ಪೇಶ್ವೆ ಬಾಜೀರಾಯರು ಒಂದು ಲಕ್ಷ ವರಹ , ಮಕರ ಕಂಠೀ, ಎರಡು ಮಣ ತೂಕದ ಬಂಗಾರದ ಮಂಟಪ, ಚಿನ್ನ ಬೆಳ್ಳಿ ಕೆಲಸ ಮಾಡಿದ ಅಂಬಾರಿ ಸಮೇತ ನಾಲ್ಕು ಆನೆಗಳು, ಇಪ್ಪತ್ತೈದು ಕುದುರೆಗಳು, ಇವುಗಳನ್ನು ಶ್ರೀಮಠಕ್ಕೆ ಉದಾರವಾಗಿ ದಾನ ಮಾಡಿದರು. ಶ್ರೀಗಳನ್ನು ರಾಜಧಾನಿಯಿಂದ ಬೀಳ್ಕೊಡುವಾಗ ಪೇಶ್ವೆಯವರು ಶ್ರೀಗಳ ಆಸ್ಥಾನಪಂಡಿತರನ್ನೂ ಯಥೋಚಿತವಾಗಿ ಗೌರವಿಸಿ ಕಳುಹಿಸಿಕೊಟ್ಟರು.

ಪೂನಾದಿಂದ ಶ್ರೀಗಳು ಕೊಲ್ಲಾಪುರಕ್ಕೆ ದಯಮಾಡಿಸಿ, ಅಲ್ಲಿಯೂ ದೈವೇಚ್ಛೆಯಂತೆ. ಕೊಲ್ಲಾಪುರದ ಮಹಾರಾಜರ ಅತಿಥಿಗಳಾದರು, ಶ್ರೀಗಳ ವಿದ್ಯಾಸಂಪತ್ತು, ಪೂಜಾ ವೈಖರಿ, ಶ್ರೀಮಠದ ಕೀರ್ತಿ ವಿಶೇಷಗಳನ್ನು ಕಂಡು ಕೇಳಿ, ಅರಸರು ಆನಂದಪಟ್ಟರು. ಯಾವುದೋ ಒಂದು ಚಿಂತೆಯು ರಾಜನನ್ನು ಕಾಡುತ್ತಿರುವುದನ್ನು ಶ್ರೀಗಳು ಗುರುತಿಸಿ, ಆತನಿಗೆ ಒಂದು ವರ್ಷದಲ್ಲಿ ಪುತ್ರೋತ್ಸವವಾಗುವುದೆಂದು ಹಾರೈಸಿದರು. ಕೊಲ್ಲಾಪುರದಲ್ಲಿ ಶ್ರೀಮಹಾಲಕ್ಷ್ಮಿಯ ಪೂಜೆಯನ್ನು ಶ್ರೀಗಳು ಬಹು ವಿಜೃಂಭಣೆಯಿಂದ ನೆರವೇರಿಸಿ, ನೂರೆಂಟು ಸುಮಂಗಲಿಯರಿಗೆ ಮರದ ಬಾಗಿಣಗಳನ್ನು ಕೊಡಿಸಿದರು. ಕೊಲ್ಲಾಪುರದಿಂದ ಹರಿಹರಕ್ಕೆ ಶ್ರೀಗಳು ತೆರಳುವಾಗ, ಮಹಾರಾಜರು ಶ್ರೀಮಠಕ್ಕೆ ದಾನರೂಪವಾಗಿ, ಹತ್ತು ಸಾವಿರ ಲಕ್ಷ್ಮಿವರಹಗಳು, ನವರತ್ನ ಕಲಶದಿಂದ ಕೂಡಿದ ಬಂಗಾರದ ಪಲ್ಲಕ್ಕಿ ರತ್ನಾಭರಣಗಳು, ಬೆಳ್ಳಿಬಂಗಾರ ಕೆಲಸ ಮಾಡಿದ ಅಂಬಾರಿ ಸಮೇತ ಎರಡು ಅನೆಗಳು ಹಾಗೂ ವಿವಿಧ ಸುವರ್ಣ ರಜತಪಾತ್ರೆಗಳನ್ನು ಕೊಟ್ಟು ಕೃತಾರ್ಥರಾದರು.

ಮೈಸೂರಿಗೆ ಹಿಂತಿರುಗುವ ಮುನ್ನ ಹರಿಹರದಲ್ಲಿ ಶ್ರೀಗಳು ಶ್ರೀಹರಿಹರೇಶ್ವರನನ್ನು ಸಂದರ್ಶಿಸಿ ವಿರೂಪಾಕ್ಷಪಂಡಿತರೆಂಬ ವಿದ್ವಾಂಸರೊಡನೆ ವಾದ ಮಾಡಿ ಜಯಗಳಿಸಿದರು. ಈ ಸಮಯಕ್ಕೆ ಸರಿಯಾಗಿ ದಿವಾನ್ ಪೂರ್ಣಯ್ಯನವರಿಂದ ಮೈಸೂರಿಗೆ ಬರಲು ಅವಸರದ ಕರೆಯು ಶ್ರೀಗಳಿಗೆ ಬಂದಿತು.

ಶ್ರೀಸತ್ಯಧರ್ಮರು ತಮ್ಮ ವಿಜಯಯಾತ್ರೆ ಕಾಲದಲ್ಲಿ ನಡೆಯುತ್ತಿದ್ದ ಎಲ್ಲ ವಿದ್ಯಮಾನಗಳನ್ನೂ ಶ್ರೀಮಠಕ್ಕೆ ಸಂದ ಆದರ ಗೌರವದ ವಿಚಾರವನ್ನೂ, ದಾನ ಧರ್ಮಾದಿ ವಿವರಗಳನ್ನೂ ವಿಶೇಷ ಓಲೇಕಾರರ ಮೂಲಕ ದಿವಾನ್ ಪೂರ್ಣಯ್ಯನವರಿಗೂ, ಅವರ ಮೂಲಕ ಮೈಸೂರರಸರಿಗೂ ಆಗಾಗ ಸಂಪ್ರದಾಯ ಹಾಕಿಕೊಂಡಿದ್ದರು.

## ದಿವಾನ್ ಪೂರ್ಣಯ್ಯನವರು :-

ಪೂರ್ಣಯ್ಯನವರ ಆಹ್ವಾನದಂತೆ ಹರಿಹರದಿಂದ ಮೈಸೂರಿಗೆ ಶ್ರೀಗಳು ಹಿಂತಿರುಗಿದರು ಪೂರ್ಣಯ್ಯನವರು ಶ್ರೀಮಠದ ಅಭಿಮಾನಿಗಳಷ್ಟೇ ಅಲ್ಲದೆ. ಶ್ರೀಗಳ ಆಪ್ತ ಶಿಷ್ಯರೂ ಆಗಿದ್ದರು ಅವರು ಶ್ರೀಗಳಲ್ಲಿ ಶಾಂತಿಪಾಠ ಹಾಕಿ ಸರ್ವಮೂಲ ಗ್ರಂಥಗಳನ್ನು ಓದಲು ಪ್ರಾರಂಭಿಸಿದರು.

ಮೈಸೂರಿನಲ್ಲಿರುವಾಗ ಶ್ರೀಸತ್ಯಧರ್ಮತೀರ್ಥರು ದಿವಾನ್ ಪೂರ್ಣಯ್ಯನವರ ಅಭೀಷ್ಟದಂತೆ ಅರಮನೆಯ ಆವರಣದಲ್ಲಿರುವ ಶ್ರೀವರಾಹಸ್ವಾಮಿಯದೇವಸ್ಥಾನದಲ್ಲಿ ಶ್ರೀವರಾಹದೇವರ ಪ್ರತಿಷ್ಠಾಪನೆ ಮಾಡಿದರು.

## ಬೆಂಕಿ ದುರಂತ:-

ಸೋಮಯಾಗಾನಂತರದಲ್ಲಿ ಶ್ರೀಗಳು ಸಂಚಾರ ಹೊರಟು ತಮ್ಮ ಗುರುಗಳಾದ ಶ್ರೀಸತ್ಯವರರ ವೃಂದಾವನವಿರುವ ಸಂತೇಬಿದನೂರಿನಲ್ಲಿ ಬಿಡಾರ ಮಾಡಿದರು. ಶ್ರೀಮಠದ ಹೆಗ್ಗಳಿಕೆಯನ್ನೂ ಸರ್ವತೋಮುಖ ಬೆಳವಣಿಗೆಯನ್ನೂ ಕಂಡು ಕೆಲವರು ಹಿಗ್ಗಿದರೆ, ಇನ್ನು ಕೆಲವರಿಗೆ ಇದು ಹಿಡಿಸದೆ ಒಳಗೇ ಅಸಮಧಾನಪಡುತ್ತಿದ್ದರು. ಹೀಗಿರಲು ಒಂದು ದಿನ (ಕ್ರಿ.ಶ. 1815) ಇದ್ದಕ್ಕಿದ್ದಂತಯೇ ಶ್ರೀಮಠದ ಉಗ್ರಾಣದಲ್ಲಿ ಬೆಂಕಿ ಕಾಣಿಸಿಕೊಂಡಿತು. ಝುಲಪಿ ಕೃಷ್ಣಾಚಾರ್ಯರೂ ಆಚಾರಪ್ಪಾಚಾರ್ಯರೂ ಬಹು ಪ್ರಯಾಸದಿಂದ. ತಮ್ಮ ಜೀವದ ಹಂಗು ತೊರೆದು. ಹಲವು ದೇವರ ಪ್ರತಿಮೆಗಳನ್ನೂ, ಆಭರಣಗಳನ್ನೂ, ಕಾಗದ ಪತ್ರಗಳನ್ನೂ ಸುರಕ್ಷಿತ ಸ್ಥಾನಕ್ಕೆ ಸಾಗಿಸಲು ನೆರವಾದರು. ಅಭಿ ಶ್ರೀನಿವಾಸಚಾರ್ಯರು, ಬೆಂಕಿಯ ಜ್ವಾಲೆಯೊಳಕ್ಕೆ ನುಗ್ಗಿ ಶ್ರೀಗಳನ್ನು ಅನಾಮತ್ತು ಎತ್ತು ತಂದರು. ತಮ್ಮ ತಪಸ್ಸಿನ

ಪ್ರಭಾವದಿಂದಲೂ, ಶ್ರೀಮೂಲರಾಮರ ಕೃಪೆಯಿಂದಲೂ ಶ್ರೀಗಳು ಮೂರುನಾಲ್ಕು ದಿನಗಳಲ್ಲಿ ಚೇತರಿಸಿಕೊಂಡರು. ಇಷ್ಟಾದರೂ, ಶ್ರೀಮಠದ ಆಸ್ತಿಪಾಸ್ತಿಗಳಿಗೆ ಅಪಾರ ಹಾನಿಯಾಯಿತು. ಮೈಸೂರು ಸರ್ಕಾರದವರು ಬೆಂಕಿ ಆರಿಸುವ ಕಾರ್ಯದಲ್ಲಿ ನೆರವಾಗಿದ್ದಲ್ಲದೆ. ಪಚ್ಚೆ ರಾಮದೇವರನ್ನೂ , ವಿಜಯನಗರದ ಸಂಸ್ಥಾನಾಧೀಶರು ದಾನವಾಗಿ ಕೊಟ್ಟ ವಜ್ರಪದಕವನ್ನೂ, ಪೇಶ್ವೆಯವರಿಂದ ಕೊಡಲ್ಪಟ್ಟ ಕೆಂಪಿನ ಪದಕ, ವೈಜಯಂತಿ ಮುಂತಾದವುಗಳನ್ನು ಬೂದಿರಾಶಿಯಿಂದ ಹುಡುಕಿ ತೆಗೆಸುವುದರಲ್ಲಿ ಸಹಾಯ ಮಾಡಿದರು. ಅಗ್ನಿಶಮನವಾದ ಮೇಲೆ ಶ್ರೀಗಳು ಬರೆದು ಕೊಟ್ಟ ರೇಖಾಚಿತ್ರಗಳಂತೆ ಪೀಠ ಪ್ರಭಾವಳಿ. ನವರತ್ನಖಚಿತ ಮಂಟಪ, ಪೂಜಾ ಪಾತ್ರೆಗಳನ್ನು ಶ್ರೀಮಠಕ್ಕೆ ಮಾಡಿಸಿಕೊಟ್ಟರು. ಇಷ್ಟೇ ಅಲ್ಲದೆ ಕೆಲವು ಸುವರ್ಣ ಹಾಗೂ ರಜತ ಪಾತ್ರೆಗಳೂ, ಆಭರಣಗಳೂ, ಹೊಳೆನರಸಿಂಹಪುರದಲ್ಲಿ ತಯಾರಾದವು. ಶ್ರೀಮಠವು ಸುಸ್ಥಿತಿಗೆ ಬರಲು ಹಾಗೂ ಅದರ ಪುನರ್ವ್ಯವಸ್ಥೆಗಾಗಿ ಮೈಸೂರು ಮಹಾರಾಜರ ಸರ್ಕಾರವು ಎರಡು ಲಕ್ಷ ರೂಪಾಯಿಗಳನ್ನು ಆ ಕಾಲದಲ್ಲಿ ಖರ್ಚು ಮಾಡಿತು. ಶ್ರೀಸತ್ಯಧರ್ಮರ ಕಾಲದಲ್ಲಿ ಶ್ರೀಮಠದ ವಿಷಯದಲ್ಲಿ ಮೈಸೂರು ಸರ್ಕಾರಕ್ಕೂ ಮಹಾರಾಜರಿಗೂ ಎಷ್ಟು ಅಭಿಮಾನ ಮಮತೆ ಇತ್ತೆಂಬುದನ್ನು ಇದರಿಂದ ಮನಗಾಣಬಹುದು.

## ಸರ್ವಜ್ಞಪೀಠವನ್ನು ಬಿಟ್ಟುಕೊಟ್ಟರು:-

ಈ ಬೆಂಕಿದುರಂತವಾದ ಮೇಲೆ ಶ್ರೀಗಳು ಕಾಶೀಯಾತ್ರೆ ಹೊರಟು. ಅಲ್ಲಿ ಕಾಶೀವಿಶ್ವನಾಥ ಹಾಗೂ ಬಿಂದುಮಾಧವರ ದರ್ಶನ ಮಾಡಿದರು. ಗಂಗಾಪೂಜೆ ಮಾಡಿದರು. ಯಾತ್ರಾಕಾಲದಲ್ಲಿ ದಿನಚರಿಯಂತೆ ಪೂಜೆಪುನಸ್ಕಾರಗಳು, ಪಾಠಪ್ರವಚನಗಳು ನಿರಂತರವಾಗಿ ಸಾಗಿದ್ದವು. ಕಾಶಿಯಿಂದ ಹಿಂತಿರುಗುವಾಗ ಶ್ರೀರಂಗಪಟ್ಟಣದ ಬಳಿ ಬರುವಾಗಲೇ ಶ್ರೀಗಳು ಬಳಲಿ ಕಾಯಿಲೆ ಬಿದ್ದರು. ರಾಜ್ಯಪ್ರತಿನಿಧಿಗಳ ಸೂಚನೆಯಂತೆ, ತಮ್ಮ ಪೂರ್ವಾಶ್ರಮದ ತಮ್ಮಂದಿರಾದ ಶ್ರೀನಿವಾಸಾಚಾರ್ಯರಿಗೆ ಪಟ್ಟಕಟ್ಟಿ ಅವರನ್ನು ಶ್ರೀಸತ್ಯಸಂಕಲ್ಪರೆಂದು (ಕ್ರಿ.ಶ. 1828)

ಕರೆದರು. ಆಗ ಅವರಿಗೆ ಎಪ್ಪತ್ತೆಂಟುವರ್ಷ ವಯಸ್ಸಾಗಿತ್ತು ಶ್ರೀಮನ್ಮಹಾರಾಜರು ಪಟ್ಟಾಭಿಷೇಕ ಸಮಾರಂಭಕ್ಕೆ ದಯಮಾಡಿಸಿದ್ದರು.

### ಹೊಳೆಹೊನ್ನೂರಲ್ಲಿ ಶ್ರೀಮಠದ ಸ್ಥಾಪನೆ :-

ಕೆಲಕಾಲನಂತರ ಹಿರಿಯ ಶ್ರೀಗಳು ಚೇತರಿಸಿಕೊಂಡರು. ಹಿರಿಯ ಹಾಗೂ ಕಿರಿಯ ಸ್ವಾಮಿಗಳ ಮಧ್ಯೆ ಅಥವ ಅವರ ಶಿಷ್ಯರುಗಳ ನಡುವೆ ಯಾವ ರೀತಿಯ ವಿರಸವೂ ಉಂಟಾಗಬಾರದು ಎಂಬ ಘನುದ್ದೇಶದಿಂದ ಶ್ರೀವಂಶಿರಾಮದೇವರ ಸಹಿತ ಹಿರಿಯರು ಶಿವಮೊಗ್ಗ ಪ್ರಾಂತದ ಕಡೆ ಸಂಚಾರ ಹೊರಡುವುದೆಂದೂ, ಭದ್ರಾವತಿಯ ಸಮೀಪದಲ್ಲಿರುವ ಹೊಳೆಹೊನ್ನೂರಿನಲ್ಲಿ ಹಿರಿಯ ಸ್ವಾಮಿಗಳಿಗಾಗಿ ಸಕಲ ಸೌಕರ್ಯಗಳನ್ನು ಒದಗಿಸಲು ರಾಜ್ಯ ಸರ್ಕಾರ ಒಪ್ಪಿಕೊಂಡಿತು (ಕ್ರಿ.ಶ. 1828) ಝಲಪಿ ಕೃಷ್ಣಾಚಾರ್ಯರೂ ಶ್ರೀಪಾದಪುತ್ರರೂ ಶ್ರೀಗಳ ಜೊತೆಯಲ್ಲಿ ಇದ್ದರು. ಪೂರ್ಣ ಚೇತರಿಸಿಕೊಂಡಾದ ಮೇಲೆ ಶ್ರೀಗಳು ರಾಮೇಶ್ವರಕ್ಕೆ ಕೊನೆಯ ಬಾರಿಗೆ ಸಂಚಾರ ಹೊರಟು, ಶ್ರೀರಾಮನಾಥನ ದರ್ಶನ ಮಾಡಿಕೊಂಡು ಅಲ್ಲಿಂದ ಹಿಂತಿರುವಾಗ, ದಾರಿಯಲ್ಲಿ ತೀವ್ರ ಕ್ಷಾಮಕ್ಕೆ ಒಳಗಾಗಿ ಬೆಂಡಾಗಿದ್ದ ಅರಣೀ ಜಮೀನ್ದಾರರಿಗೆ , ಅಲ್ಲಿನ ಜಮೀನ್ದಾರನ ಆಹ್ವಾನದಂತೆ ಭೇಟಿ ಇತ್ತರು. ಅವರ ತಪಃ ಪ್ರಭಾವದಿಂದ ಅಲ್ಲಿನ ಸ್ಥಿತಿಗತಿಗಳು ಸುಧಾರಿಸಿದವು, ಇದರಿಂದ ಸುಪ್ರೀತನಾದ ಜಮೀನ್ದಾರನು, ಶ್ರೀಮಠಕ್ಕೆ ಒಂದು ಬಂಗಾರದ ಕಡಾಯವನ್ನು ಮಾಡಿಸಿ ದಾನ ಕೊಟ್ಟನು.

ಶ್ರೀಸತ್ಯಧರ್ಮತೀರ್ಥರು ರಾಮೇಶ್ವರಯಾತ್ರೆಯನ್ನು ಮುಗಿಸಿಕೊಂಡು ದಾರಿಯಲ್ಲಿ ಶ್ರೀಮುಷ್ಣಕ್ಷೇತ್ರಕ್ಕೆ ಬಂದು. ಶ್ರೀವರಾಹಸ್ವಾಮಿಯನ್ನು ಸಂದರ್ಶಿಸಿ ತಮ್ಮ ಸೇವೆ ಸಲ್ಲಿಸಲು ಉದ್ದೇಶಿಸಿದರು. ಊರು ತಲುಪುವ ವೇಳೆಗೆ , ಶ್ರೀಪಾದರಿಗೆ ವಿಪರೀತ ಜ್ವರ ಬಂದು ಬಳಲಿದರು. ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಪಡೆಯುವುದು ಅವರಿಗೆ ಕಷ್ಟವಾಯಿತು. ಭಕ್ತವತ್ಸಲನಾದ ಶ್ರೀವರಾಹಮೂರ್ತಿಯು, ದೇವಸ್ಥಾನದ ಮುಖ್ಯ ಅಧಿಕಾರಿಗಳ ಕನಸಿನಲ್ಲಿ ಕಾಣಿಸಿಕೊಂಡು, ಅಲಂಕೃತ ಉತ್ಸವಮೂರ್ತಿಗಳನ್ನು ಬೆಳಿಗ್ಗೆಯೇ ಶ್ರೀಪಾದರು ಉಳಿದಿರುವ ಕಡೆಗೆ ಒಯ್ಯಲು ಆದೇಶ ನೀಡಿದಂತೆ

ಸೂಚನೆಯಾಯಿತು. ಈ ಸಂಪ್ರದಾಯ ಇಂದಿನವರೆಗೂ ಬೆಳೆದು ಬಂದಿದೆ. ಶ್ರೀಮದುತ್ತರಾದಿಮಠಾಧೀಶರು ಶ್ರೀಮುಷ್ಣಕ್ಕೆ ದರ್ಶನಾಪೇಕ್ಷಿಗಳಾಗಿ ಬಂದಾಗ, ಉತ್ಸವಮೂರ್ತಿಯು ಬೆಳಿಗ್ಗೆ ಅವರಿಳಿದುಕೊಂಡಿರುವ ಕಡೆಗೆ ಅಲಂಕೃತವಾಗಿ ಕಳಿಸಲ್ಪಟ್ಟು, ಶ್ರೀಮಠದ ಪ್ರತಿಮೆಗಳ ಜೊತೆ ಪೂಜೆಗೊಂಡು, ಸಾಯಂಕಾಲ ದೇವಸ್ಥಾನಕ್ಕೆ ಹಿಂತಿರುಗುವುವು. ಶ್ರೀಸತ್ಯಧರ್ಮತೀರ್ಥರಂತೆ ಈಚೆಗೆ ಶ್ರೀಸತ್ಯಧ್ಯಾನರೂ, ಶ್ರೀಸತ್ಯಪ್ರಮೋದರೂ, ಶ್ರೀವರಾಹಸ್ವಾಮಿಯ ಪೂಜಾಲಾಭ ಪಡೆದಿದ್ದಾರೆ.

ಅರಣಿಯಿಂದ ಹಿಂತಿರುಗುವಾಗ ಮುಮ್ಮಡಿ ಕೃಷ್ಣರಾಜ ಭೂಪಾಲರು ಶ್ರೀಗಳನ್ನು ಬೆಂಗಳೂರಿನಲ್ಲಿ ಕಂಡು, ಜೊತೆಯಾಗಿ ಇಬ್ಬರೂ ಮೈಸೂರಿಗೆ ಬಂದರು. ಅಲ್ಲಿಂದ ಮುಂದೆ ವಿಕೃತಿನಾಮ ಸಂವತ್ಸರ ಶ್ರಾವಣ ಬಹುಳ ತ್ರಯೋದಶಿಯವರೆಗೂ ಶ್ರೀಗಳು ಹೊಳೆಹೊನ್ನೂರಿನಲ್ಲಿಯೇ ಬಿಡಾರ ಮಾಡಿದ್ದರು. ಭದ್ರಾದಂಡೆಯ ಮೇಲೆ ಶ್ರೀಗಳ ಮಠವೂ, ಊರಿನಲ್ಲಿ ಅಗ್ರಹಾರವೂ ನಿರ್ಮಾಣಗೊಂಡಿತು ಈ ಕಾಲದಲ್ಲಿಯೇ ಶ್ರೀಮಠಕ್ಕೆ ರಾಜ್ಯ ಸರ್ಕಾರದಿಂದ ವರ್ಷಾಸನವೂ ಮಂಜೂರು ಆಯಿತು.

ತಮ್ಮ ಮೂವತ್ತು ಮೂರು ವರ್ಷಗಳ ಅಧಿಕಾರಾವಧಿಯಲ್ಲಿ ಶ್ರೀಮಠಕ್ಕೆ ಕೀರ್ತಿಯನ್ನೂ ಯಶಸ್ಸನ್ನೂ ಆರ್ಥಿಕ ಸಂಪತ್ತನ್ನೂ ಧಾರಾಳವಾಗಿ ಸಂಪಾದಿಸಿಕೊಂಡು ಶ್ರೀಗಳು ವಿಕೃತಿನಾಮ ಸಂವತ್ಸರದ ಶ್ರಾವಣ ಬಹುಳ ತ್ರಯೋದಶಿ ದಿವಸ ಹೊಳೆಹೊನ್ನೂರಿನಲ್ಲಿ ನಾರಾಯಣಧ್ಯಾನಪರರಾದರು. ಅವರ ವೃಂದಾವನವು ಭದ್ರಾನದಿಯ ಬಲದಂಡೆಯ ಮೇಲೆ ನಿರ್ಮಾಣವಾಯಿತು.

### ಶ್ರೀಪಾದರ ಮುಖ್ಯ ಉಪಾಸ್ಯಮೂರ್ತಿಗಳು ಹಾಗೂ ಪ್ರತಿಷ್ಠಾಪನೆಗಳು :-

ಪೂರ್ವಾಶ್ರಮದಲ್ಲಿ ಶ್ರೀಪಾದರ ಮನೆದೇವರಾದ ಶ್ರೀಲಕ್ಷ್ಮಿನರಸಿಂಹದೇವರು ಹಾಗೂ ಅವರ ಇಷ್ಟದೈವಗಳಾದ ಶ್ರೀಹಯಗ್ರೀವದೇವರೂ, ಶ್ರೀಮಹರುದ್ರರೂ, ಆಶ್ರಮದೀಕ್ಷೆಪಡೆದನಂತರ ಅವುಗಳ ಜೊತೆಗೆ ಶ್ರೀಮದುತ್ತರಾದಿಮಠದ ಮುಖ್ಯ

ಪೂಜಾಮೂರ್ತಿಗಳಾದ ಶ್ರೀಮೂಲಸೀತಾರಾಮದೇವರು ಹಾಗೂ ಶ್ರೀದಿಗ್ವಿಜಯ-ರಾಮದೇವರು ಶ್ರೀಸತ್ಯಧರ್ಮತೀರ್ಥರ ಮುಖ್ಯ ಉಪಾಸ್ಯಮೂರ್ತಿಗಳಾಗಿದ್ದವು.

ಶ್ರೀಸತ್ಯಧರ್ಮತೀರ್ಥರು ತಮ್ಮ ಅಧಿಕಾರಾವಧಿಯಲ್ಲಿ ದಿವಾನ್ ಪೂರ್ಣಯ್ಯನವರ ಆಹ್ವಾನ ಪಡೆದು ಮೈಸೂರು ಅರಮನೆಯ ಆವರಣದಲ್ಲಿ ಶ್ರೀವರಾಹಸ್ವಾಮಿದೇವರನ್ನು, ಹೊಳೆನರಸಿಂಹಪುರದ ಶ್ರೀಮದುತ್ತರಾದಿಮಠದ ವಿಶಾಲ ಆವರಣದಲ್ಲಿ ಹಾಗೂ ಬೆಂಗಳೂರಿನ ಚಿಕ್ಕಪೇಟೆಯಲ್ಲಿರುವ ಹಳೇ ಉತ್ತರಾದಿಮಠದ ಕಟ್ಟಡದಲ್ಲಿ, ಶ್ರೀಹನುಮಂತದೇವರನ್ನು ಪ್ರತಿಷ್ಠಾಪಿಸಿದ್ದಾರೆ. ಶ್ರೀಪಾದರು ಹೊಳೆಹೊನ್ನೂರಿನಲ್ಲಿ ಬಿಡಾರ ಹೂಡಿದ್ದಾಗ ಒಬ್ಬ ಮರಾಠ ರೈತನು ತನ್ನ ಹೊಲ ಉಳುತ್ತಿರುವಾಗ ನೆಲದಲ್ಲಿ ಸಿಕ್ಕಿದ ಸುಂದರವಾದ ಚಿಕ್ಕ ಶ್ರೀ ಆಂಜನೇಯಮೂರ್ತಿಯನ್ನು, ಶ್ರೀಪಾದರಿಗೆ ಒಪ್ಪಿಸಿದ್ದಾಗಿಯೂ, ಆ ಮೂರ್ತಿಯನ್ನು ಶ್ರೀಪಾದರು ತಮ್ಮ ಬಿಡಾರದ ಹೊರಗೋಡೆಯಲ್ಲಿ ಹುದುಗಿಸಿದ್ದಾಗಿಯೂ ಹೇಳಲಾಗಿದೆ.

## ಹೊಳೆಹೊನ್ನೂರು ಕ್ಷೇತ್ರ:-

ಹೊಳೆಹೊನ್ನೂರು ಗ್ರಾಮವು ಶಿವಮೊಗ್ಗಾ ಜಿಲ್ಲೆಯ ಭದ್ರಾವತಿ ತಾಲ್ಲೂಕಿನಲ್ಲಿ ಶಿವಮೊಗ್ಗಾ - ಹರಿಹರ ಹೆದ್ದಾರಿಯಲ್ಲಿ ಭದ್ರಾನದಿಯ ದಂಡೆಯ ಮೇಲಿದೆ. ಈ ಊರಿನಲ್ಲಿ ಶ್ರೀಲಕ್ಷ್ಮೀಜನಾರ್ದನ ದೇವರು ಉಪಸ್ಥಿತರಾಗಿದ್ದಾರೆ. ಈ ಊರಿನಲ್ಲಿಯೂ , ಸಮೀಪ ಇರುವ ಹೊನ್ನಾಳಿಯಲ್ಲಿಯೂ ಒಂದು ಕಾಲದಲ್ಲಿ ಚಿನ್ನದ ಅದಿರನ್ನು ಅಗೆದು ತೆಗೆಯುತ್ತಿದ್ದರೆಂದೂ. ಆದ್ದರಿಂದ ಈ ಊರಿಗೆ ಈ ಹೆಸರು ಬಂದಿತೆಂದು ಊರಿನ ಹಿರಿಯರು ಹೇಳುತ್ತಾರೆ. ಶ್ರೀಪುರಂದರದಾಸರು ತಮ್ಮ ಎರಡು ದೇವರನಾಮಗಳಲ್ಲಿ ಈ ಊರುಗಳ ಕ್ಷೇತ್ರ ಮಹಿಮೆಯನ್ನು ಕೊಂಡಾಡಿದ್ದಾರೆ.

ಈ ಊರ ಒಂದು ಕಡೆ ಮಂಕಿ ಋಷಿಗಳ ಆಶ್ರಮವೂ ಶ್ರೀನರಸಿಂಹಕ್ಷೇತ್ರವೂ ಆದ ಭದ್ರಾವತಿ; ಹಿಂಬದಿಯಲ್ಲಿ ರುದ್ರಾಂಶ ಸಂಭೂತರಾದ ಶ್ರೀಅಕ್ಷೋಭ್ಯತೀರ್ಥರ ಆಶ್ರಮವೂ. ಸ್ವಯಂಭೂ ಅಥವಾ ಚಿಂತಾಮಣಿ ಶ್ರೀನರಸಿಂಹಕ್ಷೇತ್ರವೆಂದು

ಹೆಸರುಗೊಂಡಿರುವ ಕೂಡಲಿ ಗ್ರಾಮವು; ಮತ್ತೊಂದು ದಿಸೆಯಲ್ಲಿ ದೂರ್ವಾಸ ಆಶ್ರಮವೆಂದೂ ಶ್ರೀವೀರಾಂಜನೇಯ ಕ್ಷೇತ್ರವೂ ಆದ ಶಿವಮೊಗ್ಗ ; ಮತ್ತೊಂದು ಕಡೆ ಸಕಲ ವನಸ್ಪತಿಗಳಿಗೆ ಆಕರವೂ ಸ್ವಯಂ ಕ್ಷೇತ್ರಪ್ರಾಯವಾಗಿರುವ ದ್ರೋಣಪರ್ವತವೂ ಇದ್ದು ಈ ಪುಣ್ಯಭೂಮಿ ವಿರಾಜಿಸುತ್ತಿದೆ. ಈ ಕ್ಷೇತ್ರ ಮಹಿಮೆ ಇಷ್ಟು ಸಂಪನ್ನವಾದುದು.

### ಶ್ರೀಗಳ ವೃಂದಾವನ :-

ಶ್ರೀಗಳ ವೃಂದಾವನವು ವಿಶಿಷ್ಟ ರೀತಿಯಲ್ಲಿ ಕಟ್ಟಲ್ಪಟ್ಟು, ಅದರೊಳಗೆ ಶ್ರೀವಾದಿರಾಜರ, ಶ್ರೀಜಯತೀರ್ಥರ, ಶ್ರೀರಾಘವೇಂದ್ರರ ಹಾಗೂ ಶ್ರೀಸತ್ಯಬೋಧರ ಅಂಶಗಳನ್ನು ಒಳಗೊಂಡಿದೆ. ಈಚೆಗೆ ಶ್ರೀಸತ್ಯಸಂಕಲ್ಪರ ಅಂಶವೂ ಅದರೊಳಗೆ ಸೇರಿದೆ. ವೃಂದಾವನಸ್ಥ ಶ್ರೀಗಳಿಗೆ ನಿತ್ಯವೂ ಪೂಜೆ ಹಸ್ತೋದಕ ಸೇವೆ ನಿರಾತಂಕವಾಗಿ, ಶ್ರದ್ಧಾಪೂರ್ವಕವಾಗಿ ಸಾಂಗವಾಗಿ ನಡೆಯುತ್ತಿದೆ. ವೃಂದಾವನದ ಸನಿಹದಲ್ಲಿ ಶ್ರೀಗಳ ಸಹಪಾಠಿಗಳೂ, ಶಿಷ್ಯರೂ ಆಗಿದ್ದ ನರಸಿಂಹ ಒಡೆಯರೆಂಬ ಬಿಡಿಸನ್ಯಾಸಿಗಳ ವೃಂದಾವನವೂ ಇದೆ.

## ಶ್ರೀಸತ್ಯಧರ್ಮತೀರ್ಥರ ಕೃತಿಗಳು

1. ಗಂಗಾಲಹರೀ
2. ಕವಿಕಂಠಮಣಿ
3. ಯದುವರಚರಿತಾಮೃತ ಲಹರೀ
4. ಭಗವದ್‌ಭಜನಮ್
5. ವಿರಹಿಮೋದ ಸುಧಾ
6. ಹಿತೋಪದೇಶ
7. ಶ್ರೀರಂಗೇಶ್ವರ ಶೃಂಗಾರಲಹರೀ
8. ಶ್ರೀಲಕ್ಷ್ಮೀನರಸಿಂಹಸ್ತೋತ್ರಮ್
9. ನಿತ್ಯಸಂಸಾರೀಲಿಂಗಭಂಗ ವಿಚಾರ

10. ಗೀತಾಮಾಹಾತ್ಮ್ಯಸಾರಸಂಗ್ರಹ
11. ನವಗ್ರಹ ಸ್ತೋತ್ರಮ್
12. ಶ್ರೀವಾದಿರಾಜಸ್ತೋತ್ರಮ್
13. (ಶ್ರೀಸತ್ಯವರ) ಶ್ರೀಪಾದ ಪಾದುಕ ಸ್ತೋತ್ರಮ್(ಗುರು)
14. ಅಂತರ್ಲಾಪಿಕಾಃ
15. ಬಹಿರ್ಲಾಪಿಕಾಃ
16. ಭವಾನೀ(ನದಿ) ಸ್ತೋತ್ರಮ್
17. ಆಶೀರ್ವಚನಮ್
18. ಹೇಮಾವತೀ ನದೀ ಸ್ತೋತ್ರಮ್
19. ಕೆಲವು ಸುಭಾಷಿತಗಳು
20. ಕೆಲವು ಪ್ರಾಕೃತ ಕೃತಿಗಳು
21. ಶ್ರೀಸತ್ಯವರಶ್ರೀಪಾದ ಪಾದುಕಾ ಸ್ತೋತ್ರ
22. ಗುರ್ವಷ್ಟಕಮ್

## ವ್ಯಾಖ್ಯಾನ ಗ್ರಂಥಗಳು

1. ತತ್ವ ಸಂಖ್ಯಾನ ಟಿಪ್ಪಣಿ
2. ಲಲಿತಪದಮಂಜರೀ(ನಮಕಚಮಕ ವ್ಯಾಖ್ಯಾನ)
3. ಶ್ರೀಮದ್ಭಾಗವತ ಟಿಪ್ಪಣೀ (6, 8,9,10 ಮತ್ತು 11 ಸ್ಕಂದಗಳಿಗೆ ಸಮಗ್ರ ಹಾಗೂ ಸಪ್ತಮ ಸ್ಕಂದದ ಕೆಲವು ಅಧ್ಯಾಯಗಳಿಗೆ )
4. ವಿರಾಟಪರ್ವ ಟಿಪ್ಪಣೀ
5. ಉದ್ಯೋಗಪರ್ವ ಟಿಪ್ಪಣೀ
6. ರಾಮಾಯಣ ಟಿಪ್ಪಣೀ
7. ವಿರಹಿಮೋದಸುಧಾವ್ಯಾಖ್ಯ
8. (ಶ್ರೀಸತ್ಯವರ) ಶ್ರೀಪಾದಪಾದುಕಾ ಸ್ತೋತ್ರ ವ್ಯಾಖ್ಯಾನ

9. ತರಂಗಿಣೀಶ್ಲೋಕ ವ್ಯಾಖ್ಯಾ
10. ವಿಷ್ಣುತತ್ವವಿನಿರ್ಣಯ ಟೀಕಾಟಿಪ್ಪಣೀ
11. ಭ್ಯಾಷ್ಯದೀಪಿಕಾಯುಕ್ತಿವಾತ್ಯಾ (ಗುರು ಲಘು)

|| ಶ್ರೀಸತ್ಯಧರ್ಮತೀರ್ಥಗುರ್ವಂತರ್ಗತ ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವೇಶಾರ್ಪಣಮಸ್ತು||

ಗ್ರಂಥ ಋಣ :
ಶ್ರೀ ನವರತ್ನ ನಾರಾಯಣ ಮೂರ್ತಿ ಯವರ
ಶ್ರೀಸತ್ಯಧರ್ಮತೀರ್ಥರು - ಜೀವನ ಹಾಗೂ ಕೃತಿಗಳ ಸಂಕ್ಷಿಪ್ತ ಪರಿಚಯ